**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಛೇರಿ,**

**ಬೆಂಗಳೂರು ಉತ್ತರ ಜಿಲ್ಲೆ, ಕೆ.ಜಿ. ರಸ್ತೆ, ಬೆಂಗಳೂರು-2.**

**ನಮೂನೆ-2**

ಸಂಖ್ಯೆ: ಅನು1.ಪ್ರಾ.ಶಿ.ಅ./ಹೊ.ಶಾ.ನೊ. 87/2015-16 ದಿನಾಂಕ: 09-06-2016

ನಿಯಮ 30ರ ಉಪನಿಯಮ 5(ಬಿ)ಪ್ರಮಾಣ ಪತ್ರ ಸಂಖ್ಯೆ: 40/2015-16

ವಿವೇಕ ವಿದ್ಯಾ ಟ್ರಸ್ಟ್ (ರಿ) ಬ್ಯಾಡರಹಳ್ಳಿ ವಿಶ್ವನೀಡಂ ಪೋಸ್ಟ್ ಬೆಂಗಳೂರು-91 ಇವರ ಗೌವರ್ನಿಂಗ್ ಕೌನ್ಸಿಲ್ ಕರ್ನಾಟಕ ಶಿಕ್ಷಣ ಕಾಯ್ದೆ. 1983(ಕರ್ನಾಟಕ ಆ್ಯಕ್ಟ್ 1. 1995 ಸೆಕ್ಷನ್ 31) ಮತ್ತು ಸರ್ಕಾರದ ಆದೇಶ ಸಂಖ್ಯೆ : ಇಡಿ.617.ಪಿಜಿಸಿ-2015, ದಿನಾಂಕ : 23-12-2015 ರಂತೆ ದಿನಾಂಕ:09-06-2016, ಒಂಬತ್ತು-ಜೂನ್-ಎರಡು ಸಾವಿರದ ಹದಿನಾರರಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೊಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1. | ಕ್ರ.ಸಂ. | 40/2016-17 |
| 2. | ಶಾಲೆಯ ಹೆಸರು ಮತ್ತು ವಿಳಾಸ | ವಿದ್ಯಾ ಸಾಮ್ರಾಟ್ ಇಂಟರ್‌ನ್ಯಾಷನಲ್ ಸ್ಕೂಲ್ ಹೇರೋಹಳ್ಳಿ, ಸಂ ನಂ.108 ತುಂಗಾನಗರ ಮುಖ್ಯರಸ್ತೆ ,ಬ್ಯಾಡರಹಳ್ಳಿ ವಿಶ್ವನೀಡಂ ಪೋಸ್ಟ್ ಬೆಂಗಳೂರು-91 |
| 3. | ಅನುಮತಿ ನೀಡಿದ ತರಗತಿ | ಪ್ರಾಥಮಿಕ 1 ರಿಂದ 5 ಆಂಗ್ಲ ಮಾಧ್ಯಮ |
| 4. | ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ | 2016-17 |
| 5. | ಅನುಮತಿ ನೀಡಿದ ಮಾಧ್ಯಮ | ಆಂಗ್ಲ ಮಾಧ್ಯಮ (ಶಾಶ್ವತ ಅನುದಾನ ರಹಿತ) |
| 6. | ಶುಲ್ಕ ಪಾವತಿ ಮಾಡಿರುವ ವಿವರ | ನೊಂದಣಿ ಶುಲ್ಕ : ರೂ.25,000-00<br>ಪರಿಷ್ಕರಣಾ ಶುಲ್ಕ : ರೂ.10,000-00 |
| 7. | ಶಾಲಾ ನೊಂದಣಿಗೆ ಶಿಫಾರಸ್ಸು ಮಾಡಿದ ಅಧಿಕಾರಿಗಳ ಹೆಸರು ಹಾಗೂ ಪದನಾಮ | ಶ್ರೀ ಗೋಪಾಲಕೃಷ್ಣ ಕ್ಷೇತ್ರ ಶಿಕ್ಷಣಾಧಿಕಾರಿಗಳು ಉತ್ತರ ವಲಯ-1, ಬೆಂಗಳೂರು ಉತ್ತರ ಜಿಲ್ಲೆ |

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ : 40 ಪುಟ ಸಂಖ್ಯೆ:65 ವಾಲ್ಯೂಂ: 03 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೊಂದಣಿ ವಹಿಯಲ್ಲಿ ನೊಂದಾಯಿಸಲಾಗಿದೆ.

ಈ ನೋಂದಣಿ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗೊಳಪಟ್ಟು ನೀಡಲಾಗಿದೆ. ಇದರಲ್ಲಿ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ ಮೇಲ್ಕಂಡ(ನೋಂದಣಿ)ಅನುಮತಿಯನ್ನು ರದ್ದುಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

1] ಈ ನೊಂದಾವಣೆಯು ನಿಯಮ-3ರ(4) ಮತ್ತು (5)ಕ್ಕೆ ಒಳಪಟ್ಟಿರುತ್ತದೆ.

2] ಗೌವರ್ನಿಂಗ್ ಕೌನ್ಸಿಲ್‌ರವರು ನಿಯಮ 4(4)ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು, ನಿಯಮ 3(ಎ) ಪ್ರಕಾರ ಶಾಲೆಯನ್ನು ಅನುಮತಿ ನೀಡಿದ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸುವುದು.

3] ಶಾಲಾ ನಿವೇಶನಕ್ಕೆ ವಿಸ್ತೀರ್ಣ, ಕಟ್ಟಡ, ಪಾಠೋಪಕರಣ/ಪೀಠೋಪಕರಣಗಳು, ಸಿಬ್ಬಂದಿ ವರ್ಗ, ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

4] ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿಯಿಲ್ಲದೇ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.

5] ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಇದೇ ಆಡಳಿತ ಮಂಡಳಿಯು, ಇದೇ ಹೆಸರಿನಲ್ಲಿ ಇದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು.

6] ಕರ್ನಾಟಕ ಸಮಗ್ರ ಶಿಕ್ಷಣ ಮಸೂದೆ 1983 ಕರ್ನಾಟಕ ಆ್ಯಕ್ಟ್ 1995 ಇದರಡಿಯಲ್ಲಿ ಬರುವ ಕಾಯಿದೆಗಳನ್ನು ತಪ್ಪದೆ ಕಟ್ಟುನಿಟ್ಟಾಗಿ ಪಾಲಿಸುವುದು.

7] ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಶಾಲೆಗಳಿಗೆ ಸಂಬಂಧಿಸಿದಂತೆ ನೋಂದಣಿಯಾಗಿರುವ ಶಾಲೆಗಳೆಲ್ಲವೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 175 ಪಿ.ಎಂ.ಸಿ 95 ದಿನಾಂಕ:7-9-1998 ಮತ್ತು ಇಡಿ 175 ಪಿ.ಎಂ.ಸಿ 97 ದಿನಾಂಕ: 29-12-1998ರಂತೆ ಶಾಶ್ವತ ಅನುದಾನ ರಹಿತ ಶಾಲೆಗಳೆಂಬುದಾಗಿ ಪರಿಗಣಿಸಿದೆ.

8] ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು (ಶಿಸ್ತು ಮತ್ತು ನಿಯಂತ್ರಣ) ನಿಯಮ 1978ರ ನಿಯಮಗಳನ್ನು ಹಾಗೂ 1999ರ ನಿಯಮಗಳನ್ನು ತಪ್ಪದೇ ಪಾಲಿಸುವುದು ಮತ್ತು ಬದ್ಧರಾಗಿರತಕ್ಕದ್ದು.

9] ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ಪಾಲಿಸತಕ್ಕದ್ದು. ಇಲಾಖಾ ನಿಯಮಗಳ ಪ್ರಕಾರ ತರಬೇತಿ ಮತ್ತು ವಿದ್ಯಾರ್ಹತೆ ಹೊಂದಿದ್ದ ಶಿಕ್ಷಕರನ್ನು ನೇಮಿಸತಕ್ಕದ್ದು.

10] ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೊಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ 2 ತಿಂಗಳೊಳಗಾಗಿ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ತಪ್ಪದೇ ತಿಳಿಸತಕ್ಕದ್ದು. ಕ್ಷೇತ್ರಶಿಕ್ಷಣಾಧಿಕಾರಿಗಳು ಈ ಕಛೇರಿಗೆ ವರದಿ ಮಾಡತಕ್ಕದ್ದು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶವು ತಂತಾನೆ ರದ್ದಾಗುವುದು.

11] ಪ್ರತಿ ವರ್ಷವು ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆ ಹಾಗೂ ಶಿಕ್ಷಕರ ಕಾರ್ಮಿಕ ವಿಮೆ ಮಾಡಿಸುವುದು. ಸಿಬ್ಬಂದಿ ವೇತನವನ್ನು ಬ್ಯಾಂಕ್ ಮೂಲಕ ಪಾವತಿಸುವುದು.

Secretary
VIVEKA VIDYA TRUST (R)
BENGALURU

12] ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 27 ಎಸ್.ಇ.ಪಿ 03 ದಿನಾಂಕ:13-12-2003ರ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ, ಶಾಲೆಯಲ್ಲಿ ನೇಮಕಗೊಂಡಿರುವ ಸಿಬ್ಬಂದಿಯವರುಗಳ ಸೇವಾ ಪುಸ್ತಕಗಳನ್ನು ತೆರೆದು ಅದರಲ್ಲಿ ಶೈಕ್ಷಣಿಕ ಸೇವಾ ವಿವರಗಳನ್ನು ನಿಯಮಾನುಸಾರ ದಾಖಲೆ ಮಾಡಿ ಕಡ್ಡಾಯವಾಗಿ ನಿರ್ವಹಿಸುವುದು. ಶಾಲೆಯಲ್ಲಿ ಯುಕೊ ಕ್ಲಬ್ ಸ್ಥಾಪನೆ ಕಡ್ಡಾಯವಾಗಿರುತ್ತದೆ.

13] ಶಾಲಾ ಶಿಕ್ಷಕರುಗಳನ್ನು ಗಣತಿ ಕಾರ್ಯಕ್ಕೆ ಕಡ್ಡಾಯವಾಗಿ ನಿಯೋಜಿಸುವುದು.

14] ವರ್ಗಾವಣೆ ಪತ್ರ ಹಾಗೂ ಕಛೇರಿಯ ವ್ಯವಹಾರವನ್ನು ಮುಖ್ಯ ಶಿಕ್ಷಕರು ಜವಾಬ್ದಾರಿಯ ಮೇಲೆ ನಿರ್ವಹಿಸುವುದು. ದಾಖಲಾತಿ/ಹಾಜರಾತಿ ಹಾಗೂ ಶೈಕ್ಷಣಿಕ ಪ್ರಗತಿಯನ್ನು ಪ್ರತಿ ತಿಂಗಳು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು.

15] ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಯಾವುದೇ ದಾಖಲೆಗಳು ಸುಳ್ಳು ದಾಖಲೆಗಳೆಂದು ಕಂಡು ಬಂದಲ್ಲಿ ಈ ನೋಂದಣಿಯನ್ನು ರದ್ದುಪಡಿಸಲಾಗುವುದು.

16] ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗದಿಕರಣ ಇತ್ಯಾದಿ) ನಿಯಮಾವಳಿಗಳು 1995ರ ನಿಯಮ 4, 5, 6 ಮತ್ತು 8ರ ಅನ್ವಯ ಸುರಕ್ಷತಾ ಕ್ರಮಕ್ಕಾಗಿ ಶಾಲಾ ಕಟ್ಟಡವು ಕಡ್ಡಾಯವಾಗಿ ಉತ್ತಮ ಗುಣಮಟ್ಟದ ಮೇಲ್ಛಾವಣಿಯನ್ನು ಹೊಂದಿದ್ದು ಉತ್ತಮ ಗಾಳಿ, ಬೆಳಕಿಗೆ ಅವಕಾಶವಿರಬೇಕು. ಬಾಲಕ ಮತ್ತು ಬಾಲಕಿಯರಿಗೆ ನಿಯಮಾನುಸಾರ ಪ್ರತ್ಯೇಕ ಶೌಚಾಲಯಗಳನ್ನು ಒದಗಿಸಬೇಕು. ಶುದ್ಧ ಕುಡಿಯುವ ನೀರನ್ನು ಒದಗಿಸಬೇಕು. ಶಾಲಾ ಆವರಣದಲ್ಲಿ ಅಪಾಯಕಾರಿ ಸ್ಥಳಗಳಿಗೆ ಬೇಲಿ ಹಾಕಿ ಶಾಲಾ ಆವರಣಕ್ಕೆ ಮಕ್ಕಳ ಸುರಕ್ಷತೆಗಾಗಿ ಕಾಂಪೌಂಡ್‌ನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು ಮತ್ತು ಬೆಂಕಿ ಆಕಸ್ಮಿಕಗಳನ್ನು ತಪ್ಪಿಸಲು ಕಡ್ಡಾಯವಾಗಿ ಅಗ್ನಿನಂದಕ ಅಳವಡಿಸುವ ಮೂಲಕ ಅಗತ್ಯ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕು.

17] ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗದಿಕರಣ ಇತ್ಯಾದಿ) ನಿಯಮಾವಳಿ 1995ರನ್ವಯ ಇಲಾಖೆ ಮತ್ತು ಸರ್ಕಾರ ನಿಗದಿಪಡಿಸಿದ ಪಠ್ಯಪುಸ್ತಕಗಳನ್ನು ಮಾತ್ರ ಬೋಧಿಸತಕ್ಕದ್ದು ಹಾಗೂ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಹೊರೆಯಾಗದಂತೆ ಕ್ರಮ ವಹಿಸುವುದು.

18] 1 ರಿಂದ 5ನೇ ತರಗತಿಯಲ್ಲಿ ಆಂಗ್ಲ ಮಾಧ್ಯಮ ಪುಸ್ತಕಗಳನ್ನು ಹೊರತುಪಡಿಸಿ ಬೇರೆ ಯಾವುದೇ ಮಾಧ್ಯಮದ ಪುಸ್ತಕಗಳನ್ನು ಹೆಚ್ಚುವರಿಯಾಗಿ ತರಗತಿಯಲ್ಲಿ ಬಳಸಬಾರದು.

19] ಅನುಮತಿ ನೀಡಿದ 5 ವರ್ಷಗಳವರೆಗೆ ಶಾಲಾ ಸ್ಥಳಾಂತರ ಮತ್ತು ಹಸ್ತಾಂತರಕ್ಕೆ ಅವಕಾಶವಿರುವುದಿಲ್ಲ.

20] ಅನುಮತಿ ಪಡೆದ 2 ತಿಂಗಳೊಳಗಾಗಿ ಕರ್ನಾಟಕ ಶಿಕ್ಷಣ ಕಾಯ್ದೆ 1983(ಆಕ್ಟ್ 1 ಆಫ್ 1995) ಪ್ರಕಾರ ಸೆಕ್ಷನ್ 36 ರಿಂದ 39ರ ರೀತ್ಯಾ ಹಾಗೂ ಇಡಿ 131 ವಿವಿಧ 98, ಬೆಂಗಳೂರು ದಿನಾಂಕ:04-11-99ರಂತೆ ಮಾನ್ಯತೆ ನವೀಕರಣ ಹೊಂದಲು ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 137 ವಿವಿಧ 98, ಬೆಂಗಳೂರು, ದಿನಾಂಕ: 19-05-99ರ ಪ್ರಕಾರ ಸಕ್ಷಮ ಪ್ರಾಧಿಕಾರಿಗಳಿಗೆ ಅರ್ಜಿ ಸಲ್ಲಿಸತಕ್ಕದ್ದು. ಹಾಗೂ ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ನಿಗಧಿತ ಭದ್ರತಾ ಠೇವಣಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.

21] ನೆಲ ಅಂತಸ್ತಿನಲ್ಲಿಯೇ ತರಗತಿಗಳನ್ನು ನಡೆಸುವಂತೆ ಷರತ್ತು ವಿಧಿಸಿ ಆದೇಶ ನೀಡಿದೆ. ಒಂದು ವೇಳೆ ಸದರಿ ಷರತ್ತು ಪಾಲಿಸದಿದ್ದರೆ ನೀಡಿದ ಅನುಮತಿ ತಂತಾನೆ ರದ್ದಾಗುತ್ತದೆ.

22] 100 ಮೀಟರ್ ದೂರದ ಸುತ್ತಳತೆಯಲ್ಲಿ ಧೂಮಪಾನ ನಿಷೇದ ಫಲಕ ಅಳವಡಿಸುವುದು ಕಡ್ಡಾಯವಾಗಿರುತ್ತದೆ.

23] ಶಾಲಾ ವಾಹನಗಳು ಇದ್ದಲ್ಲಿ,ನಿರ್ದೇಶಕರು(ಪ್ರಾ.ಶಿ)ರವರಸುತ್ತೋಲೆ ಸಂಖ್ಯೆ ಸಿ7(1)ಪ್ರಾ.ಶಿ.ಅ/ಖಾ.ಶಾ.ಮೊ/ ಇತರೆ 24/2010-11 ದಿನಾಂಕ:22.09.10 ರನ್ವಯ ಕಡ್ಡಾಯವಾಗಿ ಸೂಚನೆಗಳನ್ನು ಪಾಲಿಸುವುದು.

24] ಉಚಿತ & ಕಡ್ಡಾಯ ಶಿಕ್ಷಣ ಮಕ್ಕಳ ಹಕ್ಕು ಕಾಯ್ದೆ 2009 ಹಾಗೂ ನಿಯಮ 2012ರಂತೆ 25% ರಷ್ಟು ಉಚಿತ ಸೀಟುಗಳನ್ನು ಮೀಸಲಾತಿ ಇಟ್ಟು ದಾಖಲಾತಿ ಮಾಡಿಕೊಳ್ಳಬೇಕಾಗಿರುವುದು ಕಡ್ಡಾಯ ವಾಗಿರುತ್ತದೆ.

25] ಕರ್ನಾಟಕ ಸಂಘಗಳ ನೊಂದಣಿ ನಿಯಮ ಪ್ರಕಾರ ಪ್ರತಿ ವರ್ಷ ಆಡಿಟ್ ನಡೆಸಿ ವರದಿಯನ್ನು ಸಕ್ಷಮಪ್ರಾಧಿಕಾರಕ್ಕೆ ಸಲ್ಲಿಸುವುದು.

26] ಮಕ್ಕಳ ಸುರಕ್ಷತೆ ಬಗ್ಗೆ ಇಲಾಖೆ ಹೊರಡಿಸಿರುವ ಮಾರ್ಗಸೂಚಿ ಪ್ರಕಾರ ಕ್ರಮ ಕೈಗೊಳ್ಳತಕ್ಕದ್ದು.

(ಹೆಚ್.ಬಿ.ಮಂಜುನಾಥ್)

ದಿನಾಂಕ: 09-06-2016

ಉಪನಿರ್ದೇಶಕರು(ಆಡಳಿತ) ಹಾಗೂ ನೋಂದಣಾಧಿಕಾರಿಗಳು

ಇವರಿಗೆ:

1] ಕಾರ್ಯದರ್ಶಿಗಳು, ವಿವೇಕ ವಿದ್ಯಾ ಟ್ರಸ್ಟ್ (ರಿ) ಬ್ಯಾಡರಹಳ್ಳಿ ವಿಶ್ವನೀಡಂ ಪೋಸ್ಟ್ ಬೆಂಗಳೂರು-91

2] ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉತ್ತರ ವಲಯ-1, 2ನೇ ಹಂತ ರಾಜಾಜಿನಗರ, ಬೆಂಗಳೂರು-10.

3] ಜ್ಞಾಪನಾ ಕಡತ / ಕಛೇರಿ ಪ್ರತಿ.

Secretary
VIVEKA VIDYA TRUST (R)
BENGALURU